ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್

ಶ್ರೀ ಶ್ರೀ ಸುಂದರ್ ಪಿ. ಗೌಡ -ವಿರುದ್ಧ ಕರ್ನಾಟಕ ರಾಜ್ಯ, ತಾವರೆಕೆರೆ ಪೊಲೀಸ್ ಸ್ಟೇಷನ್

ಕ್ರಿಮಿನಲ್ ಪರಿಷ್ಕರಣಾ ಅರ್ಜಿಸಂಖ್ಯೆ: 1172/2019, ದಿನಾಂಕ 31 ನೇ ಅಕ್ಟೋಬರ್, 2019

ಆಜ್ಞೆ

ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್:

ಎಸ್.ಸಿ.ಸಂಖ್ಯೆ: 77/2017,ದಿನಾಂಕ: 17.08.2019 ರಲ್ಲಿ III ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ರಾಮನಗರ ಇವರು 1 ರಿಂದ 5 ನೇ ಆರೋಪಿಗಳ ವಿರುದ್ಧ ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡಿ ಮತ್ತು 6 ನೇ ಆರೋಪಿಯ ಸಂಬಂಧದಲ್ಲಿ ಪುರಸ್ಕರಿಸಿ ಹಾಗೂ ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 304 II ನೇ ಪ್ರಕರಣದಡಿಯಲ್ಲಿನ ದಂಡನೀಯ ಅಪರಾಧಕ್ಕಾಗಿ ವಿಲೆ ಮಾಡಿ ನೀಡಲಾಗಿದ್ದ ಆದೇಶವನ್ನು ಅರ್ಜಿದಾರ 1 ನೇ ಆರೋಪಿಯು ಪ್ರಶ್ನಿಸಿ, ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಅರ್ಜಿದಾರ -1 ನೇ ಆರೋಪಿಯ ಪರ ವಕೀಲರಾದ ಶ್ರೀ ಎಂ.ಎಸ್. ಶ್ಯಾಮಸುಂದರ್ ಅವರ ವಾದವನ್ನು ಹಾಗೂ ಎದುರುದಾರ ರಾಜ್ಯದ ಪರ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ರುವರಾದ ಶ್ರೀ ವಿ.ಎಂ. ಶೀಲವಂತ್ರವರ ವಾದಗಳನ್ನು ನಾನು ಆಲಿಸಿರುತ್ತೇನೆ.

3. ಮೊಕದ್ದಮೆಯ ಸಂಕ್ಷಿಪ್ತ ಸಂಗತಿ ಹೀಗಿದೆ:1 ನೇ ಆರೋಪಿಯು ' ಮಾಸ್ತಿ ಗುಡಿ ' ಎಂಬ ಹೆಸರಿನ ಕನ್ನಡ ಚಲನಚಿತ್ರದ ನಿರ್ಮಾಪಕ; 2 ನೇ ಆರೋಪಿ ಆರ್. ನಾಗಶೇಖರ ನಿರ್ದೇಶಕ; 3 ನೇ ಆರೋಪಿ ಸಿದ್ಧಾರ್ಥ @ ಸಿದ್ದು, ಸಹಾಯಕ ನಿರ್ದೇಶಕ; 4 ನೇ ಆರೋಪಿ ಕೆ. ರವಿಕುಮಾರ್ ( @ ರವಿವರ್ಮ, ಸಾಹಸ ನಿರ್ದೇಶಕ, 5 ನೇ ಆರೋಪಿ ಭರತ್ ರಾವ್ ಯುನಿಟ್/ಪ್ರೊಡಕ್ಷನ್ ಮ್ಯಾನೇಜರ್ ಆಗಿದ್ದು, ಇವರು ಹೆಲಿಕ್ಯಾಪ್ಟರನ್ನು ಬಳಿಸಿ ತಿಪ್ಪಗೊಂಡನಹಳ್ಳಿ ಜಲಾಶಯದ ಹಿನ್ನೀರಿನಲ್ಲಿ ಸದರಿ ಚಲನಚಿತ್ರದ ಕೊನೆಯ ದೃಶ್ಯವನ್ನು ಚಿತ್ರೀಕರಿಸುವ ಉದ್ದೇಶ ಹೊಂದಿದ್ದರು.ಕೊನೆಯ ದೃಶ್ಯವನ್ನು ಚಿತ್ರೀಕರಿಸುವ ಪ್ರಕ್ರಿಯಾ ವಿಧಾನದಲ್ಲಿ 1 ರಿಂದ 5 ನೇ ಆರೋಪಿಗಳು 6 ನೆಯ ಆರೋಪಿಯೊಂದಿಗೆದಿನಾಂಕ: 07.11.2016 ರಂದು ಮಧ್ಯಾಹ್ನ 2.45 ರ ವೇಳೆಗೆ, ಸರ್ಕಾರಿ ಪ್ರಾಧಿಕಾರವು ನೀಡಿದ್ದ ಲೈಸೆನ್ಸ್ ಹಾಗೂ ಅನುಮತಿಯ ಷರತ್ತುಗಳನ್ನು ಉಲ್ಲಂಘಿಸಿದರೆಂದು ಆಪಾದಿಸಲಾಗಿದೆ.ಆ ಪ್ರಕ್ರಿಯೆಯಲ್ಲಿ ಆರೋಪಿ ವ್ಯಕ್ತಿಗಳು ಸದರಿ ಚಲನಚಿತ್ರದ ನಾಯಕ ನಟ ' ದುನಿಯಾ ವಿಜಯ್ ' ಮತ್ತು ಖಳನಾಯಕರಾದ ' ರಾಘವ್ ಉದಯ್ ' ಮತ್ತು ' ಅನಿಲ್ ಕುಮಾರ್'ರವರನ್ನು ಸಾಹಸ ನಿರ್ದೇಶಕನ ಜೊತೆ ಹೆಲಿಕಾಪ್ಟರ್ ಹತ್ತುವಂತೆ ಮಾಡಿದರು.ಹೆಲಿಕಾಪ್ಟರ್ ತೆರೆದ ಬಾಗಿಲುಗಳೊಂದಿಗೆ ತಿಪ್ಪಗೊಂಡನಹಳ್ಳಿ ಜಲಾಶಯದ ಮಧ್ಯಭಾಗದಲ್ಲಿ 25 ರಿಂದ 30 ಅಡಿಗಳ ಎತ್ತರದಲ್ಲಿ ಹಾರುತ್ತಿತ್ತು.ಆ ಸಂದರ್ಭದಲ್ಲಿ ಸಾಹಸ ನಿರ್ದೇಶಕರು ಮೇಲೆ ಹಾರುತ್ತಿದ್ದ ಹೆಲಿಕಾಪ್ಟರ್ನಿಂದ ಸದರಿ ನಟರುಗಳು ಧುಮುಕುವಂತೆ ಮಾಡಿದರು.ಧುಮುಕಿದ ತರುವಾಯ ನಟರುಗಳು/ಖಳನಟರು ಸರಿ ನೀರಿನಲ್ಲಿ ಮುಳುಗಿ ಸತ್ತುಹೋದರು.ಆರೋಪಿಗಳಿಗೆ, ಖಳನಟರುಗಳಿಗೆ ಈಜು ಬರುತ್ತಿರಲಿಲ್ಲವೆಂದು ಚೆನ್ನಾಗಿಯೇ ತಿಳಿದಿದ್ದರೂ ಸಹ,

ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ.ಆ ಮೂಲಕ ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 304 ನೇ ಪ್ರಕರಣದಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾರೆ.

4. ತನಿಖೆಯ ತರುವಾಯ ಆರೋಪಿಗಳ ವಿರುದ್ಧ ಆರೋಪಪಟ್ಟಿ ದಾಖಲಿಸಲಾಯಿತು.ಆರೋಪಿಗಳು ನ್ಯಾಯಾಲಯದ ಮುಂದೆ ಹಾಜರಾಗಿ, ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದಡಿಯಲ್ಲಿ ವಿಲೆಗಾಗಿ ಅರ್ಜಿ ಸಲ್ಲಿಸಿದರು.ಅಧಿವಿಚಾರಣಾ ನ್ಯಾಯಾಲಯವು, ಸದರಿ ನಿವೇದನೆಗಳನ್ನು ಪರಿಶೀಲಿಸಿದ ನಂತರ ಅರ್ಜಿಯನ್ನು ವಜಾಗೊಳಿಸಿದೆ.ಅದನ್ನು ಪ್ರಶ್ನಿಸಿ ಅರ್ಜಿದಾರ -1 ನೇ ಆರೋಪಿಯು ಈ ನ್ಯಾಯಾಲಯದ ಮುಂದೆ ಬಂದಿದ್ದಾರೆ.

5. ಅರ್ಜಿದಾರ -1 ನೇ ಆರೋಪಿಯ ಪರ ಮಾನ್ಯ ವಕೀಲರು ಮಾಡಿದ ಮುಖ್ಯ ವಾದವೆಂದರೆ, 1 ನೇ ಆರೋಪಿಯು ಹಲವಾರು ಚಲನಚಿತ್ರ ನಿರ್ಮಾಣ ವ್ಯವಹಾರಗಳಲ್ಲಿ ತೊಡಗಿಕೊಂಡಿದ್ದಾರೆ ಮತ್ತು ಅವರು ಕೇವಲ ನಿರ್ಮಾಪಕರು ಮಾತ್ರವಾಗಿದ್ದು, ಇತರ ಹೊಣೆಗಾರಿಕೆಯನ್ನು ಇತರ ವ್ಯಕ್ತಿಗಳಿಗೆ ನಿಗದಿಪಡಿಸಲಾಗಿದೆಯೆಂಬುದಾಗಿತ್ತು.ಮುಂದುವರೆಸುತ್ತಾ, ಆರೋಪಿಗೆ ಯಾವುದೇ ಪ್ರಾತಿನಿಧ್ಯಾತ್ಮಿಕ ಹೊಣೆಗಾರಿಕೆ ವಿಧಿಸಿರಲಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.ಅಲ್ಲದೆ, ನಿರ್ದೇಶಕರು ಸದರಿ ಹಣದ ಹೂಡಿಕೆದಾರರು ಮಾತ್ರವಾಗಿದ್ದಾರೆ ಮತ್ತು ಇತರ ಕಾರ್ಯಚಟುವಟಿಕೆಗಳನ್ನು ಸದರಿ ಚಲನಚಿತ್ರವನ್ನು ಚಿತ್ರೀಕರಿಸುತ್ತಿದ್ದ ಉಳಿದ ನಿರ್ದೇಶಕರುಗಳಿಗೆ ಬಿಡಲಾಗಿತ್ತು ಎಂದು ನಿವೇದಿಸಿಕೊಂಡಿದ್ದಾರೆ.ಮುಂದುವರೆಸುತ್ತಾ, ಚಿತ್ರಕತೆಯ ಪ್ರಕಾರ ಖಳನಾಯಕರೆಂದು ಪರಿಗಣಿಸಿದ್ದ ನಟರು ಹಾರುತ್ತಿರುವ ಹೆಲಿಕಾಪ್ಟರ್‌ನಿಂದ ಧುಮುಕುವುದು ಅಗತ್ಯವಾಗಿತ್ತು.ಸದರಿ ಅಪಾಯ ಸಂಭವದ ಅರಿವಿದ್ದೂ ಅವರು ಪ್ರಯತ್ನಿಸಿದರು.ದುರದೃಷ್ಟವಶಾತ್ ಮರಣ ಸಂಭವಿಸಿತು.ಅಲ್ಲದೆ, ಮೃತರು ಸದರಿ ಸಾಹಸ ಕಾರ್ಯದ ಅಪಾಯವನ್ನು ತೆಗೆದುಕೊಂಡರು ಮತ್ತು ಅಂಥ ಸಂಗತಿ ಮತ್ತು ಸನ್ನಿವೇಶಗಳಲ್ಲಿ, ಸದರಿ ಕ್ರಮವು ಭಾರತ ದಂಡ ಸಂಹಿತೆಯ 80 ನೇ ಪ್ರಕರಣದಡಿ ಸಾಮಾನ್ಯ ಅಪವಾದದ ವ್ಯಾಪ್ತಿಯೊಳಗೆ ಬಂದರೂ, ಮಾಡಲಾದ ಸದರಿ ಉಲ್ಲಂಘನೆಯು ಯಾವುದೇ ಉದ್ದೇಶವಿಲ್ಲದೆ ಮಾಡಿದುದಾಗಿದೆ ಮತ್ತು ಆಕಸ್ಮಿಕವಾಗಿ ಹಾಗೂ ದುರದೃಷ್ಟವಶಾತ್ ಆಗಿ ಜರುಗಿದೆ.ಅವರಿಗೆ ಸದರಿ ಅಪರಾಧವನ್ನು ಮಾಡುವ ಯಾವುದೇ ಉದ್ದೇಶವಾಗಲಿ, ಅರಿವಾಗಲೀ ಇರಲಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.ಮುಂದುವರೆಸುತ್ತಾ, ಮರಣ ಸಂಭವಿಸುವ ಅಥವಾ ತೀವ್ರವಾದ ಹಾನಿಯಾಗುವ ಸಂಭವವಿದೆಯೆಂದು ತಿಳಿಯದೆ ಮಾಡಿದ್ದರೆ ಮತ್ತು ಸದರಿ ಮೃತ ವ್ಯಕ್ತಿಗಳ ಸಮ್ಮತಿಯೊಂದಿಗೆ ಅದನ್ನು ಮಾಡಿದ್ದರೆ, ಆಗ ಅಂಥ ಸನ್ನಿವೇಶಗಳಲ್ಲಿ ಸದರಿ ಕೃತ್ಯವು ಭಾರತ ದಂಡ ಸಂಹಿತೆಯ 87 ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಬರುತ್ತದೆ ಮತ್ತು ಅದು ಅಪರಾಧವಾಗುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.ಅಲ್ಲದೆ, ಸದರಿ ಕೆಲಸವನ್ನು ಮೃತರ ಸಮ್ಮತಿಯಿಂದ ಮತ್ತು ಅವರ ಅನುಕೂಲಕ್ಕಾಗಿ ಸದ್ಭಾವನೆಯಿಂದ ಮಾಡಲಾಗಿದೆಯೆಂದು ವಾದಿಸಿದ್ದಾರೆ.ಚಿತ್ರೀಕರಣ ನಡೆಯುತ್ತಿರುವಾಗ, ಇದು ಚಿತ್ರೀಕರಣದ ಅತ್ಯಾವಶ್ಯಕ ಭಾಗವಾಗಿತ್ತು ಮತ್ತು ಅದಕ್ಕೆ ಮೃತರು ಸಮ್ಮತಿ ನೀಡಿದ್ದರು.ಆ ಹಿನ್ನೆಲೆಯಲ್ಲಿ ಇಡೀ ವಿಷಯವನ್ನು ಅವಲೋಕಿಸಿದಾಗ, ಇದು ಸಹ ಭಾರತ ದಂಡ ಸಂಹಿತೆಯ 88 ನೇ ಪ್ರಕರಣದಡಿಯಲ್ಲಿ ಬರುತ್ತಿದ್ದು, ಇದು ಒಟ್ಟಾರೆಯಾಗಿ ಅಪರಾಧವೇ ಅಲ್ಲ ಎಂದು ವಾದಿಸಿದ್ದಾರೆ.ಆಪಾದಿತ ವ್ಯಕ್ತಿಗಳ ಕೃತ್ಯ ಯಾವುದೇ ಉದ್ದೇಶಪೂರ್ವಕ ಉದಾಸೀನ ಅಥವಾ ನಿರ್ಲಕ್ಷ್ಯತೆಯಿಂದ ಮಾಡಲಾಗಿದೆಯೆಂದು ಹೇಳಲಾಗುವುದಿಲ್ಲ.ಆರೋಪಿಗಳಿಗೆ ಏನನ್ನೋ ಆರೋಪಿಸಲು ಯಾವುದೇ ಕ್ರಿಮಿನಲ್ ಹೊಣೆಗಾರಿಕೆ ಇಲ್ಲವೆಂದು ನಿವೇದಿಸಿರುತ್ತಾರೆ.ಮುಂದುವರೆಸುತ್ತಾ, ಆಪಾದಿತನ ಮೇಲೆ ಭಾರತ ದಂಡ

ಸಂಹಿತೆಯ 304 ನೇ ಪ್ರಕರಣದ ಅಂಶಗಳನ್ನು ವಿಧಿಸಲು ಸಾಧ್ಯವಿಲ್ಲವೆಂದು ವಾದಿಸಿದ್ದಾರೆ.ಅಂಥ ಸನ್ನಿವೇಶಗಳಲ್ಲಿ, ಅಧಿವಿಚಾರಣಾ ನ್ಯಾಯಾಲಯವು ಆರೋಪಿಯನ್ನು ಬಿಡುಗಡೆ ಮಾಡಬೇಕಾಗಿತ್ತು.ಅಧಿವಿಚಾರಣಾ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯನ್ನು ಸರಿಯಾಗಿ ಚಲಾಯಿಸದೆ, ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ತಪ್ಪಾಗಿ ತಿರಸ್ಕರಿಸಿದೆ.ಅಲ್ಲದೆ, ಆರೋಪಿಯು ಸಾಕಷ್ಟು ಸಮರ್ಪಕ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲವೆಂಬುದನ್ನು ತೋರಿಸಲು ಯಾವುದೇ ಸಾಕ್ಷ್ಯಾಧಾರಗಳು ಇಲ್ಲದಿರುವುದರಿಂದ, ಅಧಿವಿಚಾರಣಾ ನ್ಯಾಯಾಲಯವು 1 ನೇ ಆರೋಪಿಯನ್ನು ಬಿಡುಗಡೆಗೊಳಿಸಬೇಕಾಗಿತ್ತೆಂದು ನಿವೇದಿಸುತ್ತಾ, ಅರ್ಜಿಯನ್ನು ಪುರಸ್ಕರಿಸುವಂತೆ ಹಾಗೂ ಪ್ರಶ್ನಿತ ಆದೇಶವನ್ನು ತಳ್ಳಿಹಾಕುವಂತೆ ಕೋರಿರುತ್ತಾರೆ.

6. ಇದಕ್ಕೆ ತದ್ವಿರುದ್ಧವಾಗಿ, ಮಾನ್ಯ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ -1 ಇವರು, ವಿಧಿಸಲಾಗಿದ್ದ ಷರತ್ತುಗಳು ಉಲ್ಲಂಘನೆಯಾಗಿದೆ ಎಂಬುದನ್ನು ಸಾಕ್ಷ್ಯಾಧಾರಗಳು ಸ್ಪಷ್ಟವಾಗಿ ತೋರಿಸುತ್ತವೆಂದು ನಿವೇದಿಸಿದ್ದಾರೆ.ಆರೋಪ ಪಟ್ಟಿ ಸಾಕ್ಷ್ಯವು, ಚಲನಚಿತ್ರ ಚಿತ್ರೀಕರಣ ಪೂರ್ಣಗೊಂಡ ನಂತರ, ಎಲ್ಲವನ್ನೂ ಗಂಟುಮೂಟೆ ಕಟ್ಟಲಾಗಿತ್ತು ಮತ್ತು ಸದರಿ ದೃಶ್ಯವನ್ನು ಕೈಬಿಡಲಾಗಿತ್ತು ಮತ್ತು ಸದರಿ ಚಿತ್ರೀಕರಣವನ್ನು ಮುಕ್ತಾಯಗೊಳಿಸಿದ ನಂತರ, ಚಲನಚಿತ್ರದ ನಾಯಕ ಮತ್ತು ಖಳನಾಯಕರನ್ನು ಅವರಿಗೆ ಈಜು ಬರುವುದಿಲ್ಲವೆಂದು ಚೆನ್ನಾಗಿ ಗೊತ್ತಿದ್ದೂ, ಸಮರ್ಪಕವಾದ ಸುರಕ್ಷತೆ ಹಾಗೂ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳದೆ, ಸಾಹಸ ನಿರ್ದೇಶಕನೊಂದಿಗೆ ಹೆಲಿಕಾಪ್ಟರ್ಗೆ ಹತ್ತುವಂತೆ ಮಾಡಿ, ಹಾರುತ್ತಿದ್ದ ಹೆಲಿಕಾಪ್ಟರ್ನಿಂದ ಅವರು ಧುಮುಕುವಂತೆ ಮಾಡಲಾಯಿತು.ಪರಿಣಾಮವಾಗಿ, ಖಳನಟರಿಬ್ಬರೂ ನೀರಿನಲ್ಲಿ ಮುಳುಗಿ ಸತ್ತರು ಎಂದು ನಿವೇದಿಸಿಕೊಂಡಿದ್ದಾರೆ.ಮುಂದುವರೆಸುತ್ತಾ, ಆರೋಪಿಗಳು ಯಾವುದೇ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ ಮತ್ತು ಖಳನಟರಿಗೆ ಈಜು ಬರುತ್ತಿರಲಿಲ್ಲವೆಂದು ಆರೋಪಿಗಳಿಗೆ ತಿಳಿದಿತ್ತು ಮತ್ತು ಹಾರಾಡುತ್ತಿದ್ದ ಹೆಲಿಕಾಪ್ಟರ್ನಿಂದ ಅವರನ್ನು ಧುಮುಕುವಂತೆ ಮಾಡಿದರು.ತತ್ಪರಿಣಾಮವಾಗಿ ಅವರು ನೀರಿನಲ್ಲಿ ಮುಳುಗಿ ಸತ್ತರು ಎಂಬುದನ್ನು ತೋರಿಸಲು ಆರೋಪಿಗಳ ವಿರುದ್ಧ ಮೇಲ್ನೋಟಕ್ಕೆ ಸಾಕ್ಷ್ಯಾಧಾರಗಳಿವೆಯೆಂದು ನಿವೇದಿಸಿಕೊಂಡಿದ್ದಾರೆ.ಮುಂದುವರೆಸುತ್ತಾ, ಅಧಿವಿಚಾರಣಾ ನ್ಯಾಯಾಲಯವು, ಸಂಗತಿಗಳು ಮತ್ತು ಸನ್ನಿವೇಶಗಳನ್ನು ಪರಿಗಣಿಸಿದ ನಂತರ, ಅರ್ಜಿಯನ್ನು ಸರಿಯಾಗಿಯೇ ವಜಾಗೊಳಿಸಿದೆ ಎಂದು ನಿವೇದಿಸಿಕೊಂಡಿದ್ದಾರೆ.

7. ಆರೋಪಿ-ಅರ್ಜಿದಾರರು ಮಾಡಿದ ವಾದಗಳಿಂದ, ಅವರು ಪರಸ್ಪರ ಒಬ್ಬರಿಗೊಬ್ಬರ ಮೇಲೆ ದೂಷಿಸಲು ಹೊರಟಿದ್ದಾರೆಂಬುದು ಸ್ಪಷ್ಟವಾಗುತ್ತದೆ.ಆರೋಪಿಗಳ ವಿರುದ್ಧ ಮೇಲ್ನೋಟಕ್ಕೆ ಮೊಕದ್ದಮೆಯನ್ನು ರೂಪಿಸಲು ಇದೊಂದೇ ಸಾಕಷ್ಟಾಗುತ್ತದೆ.ಹಾಗಾಗಿ ವಿಷಯವನ್ನು ಪರಿಶೀಲಿಸಿ, ಸಾಕ್ಷ್ಯದ ಸಮಯದಲ್ಲಿ ನಿರ್ಧರಿಸಬೇಕಾಗುತ್ತದೆಯೇ ಹೊರತು ಈ ಅಪಕ್ವ ಹಂತದಲ್ಲಲ್ಲ ಎಂದು ನಿವೇದಿಸಿಕೊಂಡಿದ್ದಾರೆ.ಮುಂದುವರೆಸಿ, ತೆಗೆದುಕೊಂಡ ಎಲ್ಲ ಪ್ರತಿರಕ್ಷಣಾ ವಾದಗಳು ವಾಸ್ತವದ ಪ್ರಶ್ನೆಗಳಾಗಿರುವುದರಿಂದ ಅಸಮಂಜಸವಾಗಿವೆ ಎ ಂ ದು ನಿವೇದಿಸಿಕೊಂಡಿದ್ದಾರೆ.

8. ಪಕ್ಷಕಾರರ ಪರ ಹಾಜರಾದ ಮಾನ್ಯ ವಕೀಲರು ಮಾಡಿದ ನಿವೇದನೆಗಳನ್ನು ಹಾಗೂ ದಾಖಲೆಗಳನ್ನು ತುಂಬಾ ಎಚ್ಚರಿಕೆಯಿಂದ ಹಾಗೂ ಜಾಗರೂಕತೆಯಿಂದ ಪರಿಶೀಲಿಸಿದ್ದೇನೆ.ಸದರಿ ವಾದ-ವಿವಾದಗಳನ್ನು

ಪರಿಶೀಲಿಸುವುದಕ್ಕೆ ಮೊದಲು, ಭಾರತ ದಂಡ ಸಂಹಿತೆಯ 304 ನೇ ಪ್ರಕರಣದ ಭಾಗವನ್ನು ಉದ್ಧರಿಸುವುದು ಯುಕ್ತ ಹಾಗೂ ಸರಿಯಾದ ಕ್ರಮವೆಂದು ಭಾವಿಸಿದ್ದು, ಅದನ್ನು ಈ ಮುಂದಿನಂತೆ ಓದಲಾಗಿದೆ.

"304. ಕೊಲೆಯೆಂದು ಪರಿಗಣಿಸಲಾಗದ ಆಪರಾಧಿಕ ಮಾನವ ಹತ್ಯೆಗೆ ದಂಡನೆ.-ಯಾರೇ ವ್ಯಕ್ತಿಯು, ಕೊಲೆಯೆಂದು ಪರಿಗಣಿಸಲಾಗದ ಆಪರಾಧಿಕ ಮಾನವಹತ್ಯೆಯನ್ನು ಮಾಡಿದರೆ, ಮರಣಕ್ಕೆ ಕಾರಣವಾದ ಆ ಕೃತ್ಯವನ್ನು ಮರಣವನ್ನುಂಟು ಮಾಡುವ ಉದ್ದೇಶದಿಂದ ಅಥವಾ ಮರಣವನ್ನುಂಟು ಮಾಡುವ ಸಂಭವವಿರುವ ದೈಹಿಕ ಕೃತಿಯನ್ನುಂಟು ಮಾಡುವ ಉದ್ದೇಶದಿಂದ ಮಾಡಿದ್ದರೆ, ಅವನು ಆಜೀವ ಕಾರಾವಾಸದಿಂದ ಅಥವಾ ಹತ್ತು ವರ್ಷಗಳವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿ ಂ ದ ದಂಡಿತನಾಗತಕ್ಕದ್ದು, ಮತ್ತು ಜುಲ್ಮಾನೆಗೂ ಗುರಿಯಾಗತಕ್ಕದ್ದು;

ಅಥವಾ ಆ ಕೃತ್ಯವನ್ನು, ಅದರಿಂದಾಗಿ ಮರಣವುಂಟಾಗುವ ಸಂಭವವಿದೆಯೆಂದು ತಿಳಿದೂ, ಆದರೆ ಮರಣವನ್ನುಂಟು ಮಾಡುವ ಅಥವಾ ಮರಣವನ್ನುಂಟು ಮಾಡುವಂಥ ದೈಹಿಕ ಕ್ಷತಿಯನ್ನುಂಟು ಮಾಡುವ ಉದ್ದೇಶವಿಲ್ಲದೆಯೆ ಮಾಡಿದರೆ ಹತ್ತು ವರ್ಷಗಳವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು."

9. ಭಾರತ ದಂಡ ಸಂಹಿತೆಯ 304 ನೇ ಪ್ರಕರಣವು, ಕೊಲೆಗೆ ಸಮವಲ್ಲದ ದಂಡನೀಯ ನರಹತ್ಯೆಯನ್ನು ಮಾಡುವ ವ್ಯಕ್ತಿಗೆ ಶಿಕ್ಷೆಯನ್ನು ನೀಡುತ್ತದೆ.ಮೊಕದ್ದಮೆಯ ವಾಸ್ತವಿಕ ಸಂಗತಿಗಳಿಗೆ ಸಂಬಂಧಿಸಿದಂತೆ, ಇಬ್ಬರು ಸಂತ್ರಸ್ತರ ಮರಣವು ಅಸಹಜ ಮರಣವಾಗಿದೆ ಮತ್ತು ' ಮಾಸ್ತಿಗುಡಿ ' ಚಲನಚಿತ್ರದ ಚಿತ್ರೀಕರಣವನ್ನು ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಮಾಡಲಾಗುತ್ತಿತ್ತು.ಆ ಸಮಯದಲ್ಲಿ ಆಪಾದಿಸಲಾದ ಘಟನೆ ಸಂಭವಿಸಿ ಖಳನಟರು-ಸಂತ್ರಸ್ತರು ಹಾರಾಡುತ್ತಿದ್ದ ಹೆಲಿಕಾಪ್ಟರ್ನಿಂದ ಧುಮುಕಿ ಸದರಿ ಜಲಾಶಯದ ನೀರಿನಲ್ಲಿ ಮುಳುಗಿ ಸತ್ತರು ಎಂಬುದು ವಾದ-ವಿವಾದಗಳ ಸಂದರ್ಭದಲ್ಲಿಯೂ ಸಹ ವಿವಾದವಾಗಿಲ್ಲ.ಇದು ಕೊಲೆಗೆ ಸಮವಾಗದೆ ದಂಡನೀಯ ನರಹತ್ಯೆಗೆ ಸಮವಾಗುತ್ತದೆಯೇ?ಎಂಬುದು ವಾಸ್ತವಿಕ ಸಂಗತಿಯಾಗಿದ್ದು, ಅದನ್ನು ಅಧಿವಿಚಾರಣೆಯ ಸಮಯದಲ್ಲಿಯೇ ಪರಿಗಣಿಸಿ ನಿರ್ಧರಿಸಬೇಕಾಗಿತ್ತೇ ಹೊರತು ಈ ಅಪಕ್ವ ಹಂತದಲ್ಲಲ್ಲ.ಈ ಸಂಬಂಧದಲ್ಲಿ ಆರೋಪಿಗಳ ಉದ್ದೇಶವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ.

10. ಅದು ಒತ್ತಟ್ಟಿಗಿರಲಿ.ಈ ಮೊಕದ್ದಮೆಯಲ್ಲಿ ಒಳಗೊಳ್ಳುವ ಮತ್ತೊಂದು ವಿಷಯವೆಂದರೆ, ಆರೋಪಿಗಳು ಸದರಿ ಕೃತ್ಯವನ್ನು ಗೊತ್ತಿದ್ದು ಮಾಡಿದರೆ ಅಥವಾ ಉದ್ದೇಶವಿಲ್ಲದೆ ಮಾಡಿದರೆ ಎಂಬುದನ್ನು ಮೊಕದ್ದಮೆಯ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಪರಿಗಣನೆಗೆ ತೆಗೆದುಕೊಂಡು ನಿರ್ಧರಿಸಬೇಕಾಗುತ್ತದೆ.ಅವರು ಗೊತ್ತಿದ್ದೂ ಆ ಕೆಲಸವನ್ನು ಮಾಡಿದ್ದಲ್ಲಿ, ಅಂಥ ಸಂದರ್ಭಗಳಲ್ಲಿ ಆರೋಪಿಗಳು ಭಾರತ ದಂಡ ಸಂಹಿತೆಯ 304 (II) ನೇ ಪ್ರಕರಣದಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ಅರ್ಹರಾಗುತ್ತಾರೆ.ಯಾವುದೇ ಉದ್ದೇಶವಿಲ್ಲದಿದ್ದಲ್ಲಿ, ಅಂಥ ಸಂದರ್ಭಗಳಲ್ಲಿ ಅವರು ಭಾರತ ದಂಡ ಸಂಹಿತೆಯ 304 ( I) ನೇ ಪ್ರಕರಣದ ಅಡಿಯಲ್ಲಿ ಶಿಕ್ಷೆಗೆ ಅರ್ಹರಾಗುತ್ತಾರೆ.ಆ ನಿರ್ದಿಷ್ಟ ವಿಷಯವು, ಭಾರತ ದಂಡ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ಹೇಳಲಾದ ವಿನಾಯಿತಿಯ ಅಪವಾದಗಳ ವ್ಯಾಪ್ತಿಯೊಳಗೆ ಬಂದಾಗ ಮಾತ್ರ, ಅದನ್ನು ನಿರ್ಧರಿಸಬೇಕಾಗುತ್ತದೆ.ಸಂಕ್ಷಿಪ್ತತೆಯ ಉದ್ದೇಶಕ್ಕಾಗಿ ನಾನು ಭಾರತ ದಂಡ ಸಂಹಿತೆಯ 300 ನೇ ಪ್ರಕರಣವನ್ನು ಇಲ್ಲಿ ಉದ್ಧರಿಸುತ್ತಿದ್ದು, ಅದನ್ನು ಈ ಮುಂದಿನಂತೆ ಓದಲಾಗಿದೆ:

" 300, ಕೊಲೆ:-ಇಲ್ಲಿ ಇನ್ನು ಮುಂದೆ ವಿನಾಯಿತಿಸಿದ ಸಂದರ್ಭಗಳನ್ನು ಬಿಟ್ಟು ಉಳಿದೆಡೆ ಅಪರಾಧಿಕ ಮಾನವ ಹತ್ಯೆಯು ಕೊಲೆಯೆನಿಸುತ್ತದೆ:

ಮರಣವನ್ನುಂಟು ಮಾಡಿದ ಕೃತ್ಯವನ್ನು ಮರಣವನ್ನುಂಟು ಮಾಡುವ ಉದ್ದೇಶದಿಂದ ಮಾಡಿದ್ದರೆ; ಅಥವಾ

ಎರಡನೆಯದಾಗಿ:-ಬಾಧೆಯನ್ನುಂಟು ಮಾಡಲಾಗಿರುವ ವ್ಯಕ್ತಿಯ ಮರಣವನ್ನುಂಟು ಮಾಡುವ ಸಂಭವವಿದೆಯೆಂದು ಅಪರಾಧಿಗೆ ಗೊತ್ತಿದ್ದು, ದೈಹಿಕ ಕೃತಿಯನ್ನುಂಟು ಮಾಡುವ ಉದ್ದೇಶದಿಂದ ಆ ಕೃತ್ಯವನ್ನು ಮಾಡಿದ್ದರೆ; ಅಥವಾ

ಮೂರನೆಯದಾಗಿ:-ದೈಹಿಕ ಕೃತಿಯನ್ನುಂಟು ಮಾಡುವ ಉದ್ದೇಶದಿಂದ ಆ ಕೃತ್ಯವನ್ನು ಮಾಡಿದ್ದರೆ, ಮತ್ತು ಹಾಗೆ ಮಾಡಬೇಕೆಂದು ಉದ್ದೇಶಿಸಲಾದ ದೈಹಿಕ ಕೃತಿಯು ಸಾಮಾನ್ಯವಾದ ಸ್ವಾಭಾವಿಕ ಕ್ರಮದಲ್ಲಿ ಮರಣವನ್ನುಂಟು ಮಾಡಲು ಸಾಕಷ್ಟಾಗಿದ್ದರೆ; ಅಥವಾ

ನಾಲ್ಕನೆಯದಾಗಿ:-ಅದು ಶೀಘ್ರ ಅಪಾಯಕಾರಿಯಾಗಿದ್ದು, ಆ ಮೂಲಕ ಬಹುಮಟ್ಟಿಗೆ ಮರಣವನ್ನುಂಟು ಮಾಡಿಯೇ ತೀರುವುದೆಂದು ಅಥವಾ ಅಂಥ ದೈಹಿಕ ಕೃತಿಯು ಮರಣವನ್ನುಂಟು ಮಾಡುವ ಸಂಭವವಿದೆಯೆಂದು ಆ ಕೃತ್ಯವನ್ನು ಮಾಡುವ ವ್ಯಕ್ತಿಗೆ ತಿಳಿದಿದ್ದು ಮತ್ತು ಮರಣವನ್ನುಂಟು ಮಾಡುವ ಅಥವಾ ಹಿಂದೆ ಹೇಳಿದಂಥ ಕೃತಿಯನ್ನುಂಟು ಮಾಡುವ ಸಂಭಾವ್ಯ ಅಪಾಯಕ್ಕೊಳಪಡಲು ಯಾವುದೇ ಕಾರಣವಿಲ್ಲದೆ ಆ ಕೃತ್ಯವನ್ನು ಮಾಡಿದರೆ. "

11. ಸದರಿ ಪ್ರಕರಣವು ಸಹ ಇದು ಭಾಗ -1 ರ ವ್ಯಾಪ್ತಿಯಲ್ಲಿ ಬರುತ್ತದೆಯೋ ಅಥವಾ ಭಾಗ -2 ರಲ್ಲಿ ಬರುತ್ತದೆಯೇ ಎಂಬುದು ವಾಸ್ತವ ವಿಷಯವಾಗಿದೆ ಎಂಬುದನ್ನು ನಮೂದಿಸುತ್ತದೆ.ಇದು 300 ನೇ ಪ್ರಕರಣದ ಅಡಿಯಲ್ಲಿನ ವಿನಾಯಿತಿಯ ವ್ಯಾಪ್ತಿಯೊಳಗೆ ಬರುತ್ತದೆಯೇ ಅಥವಾ ಇಲ್ಲವೇ ಎಂಬುದು ಪ್ರಾಸಿಕ್ಯೂಷನ್ ಸಾಕ್ಷ್ಯವನ್ನು ಪ್ರಾರಂಭಿಸಿದಾಗ ಮಾತ್ರ ಪರಿಶೀಲಿಸಿ ನಿರ್ಧರಿಸಬೇಕಾದ ವಿಷಯವಾಗಿದೆ.ಯಾವುದೇ ಸಾಕ್ಷ್ಯವಿಲ್ಲದೆ, ನ್ಯಾಯಾಲಯವು ಈಗ 304 ನೇ ಪ್ರಕರಣದ ಯಾವ ಭಾಗದ ಅಡಿಯಲ್ಲಿ ಸದರಿ ಅಪರಾಧವು ಬರುತ್ತದೆ ಎಂಬುದನ್ನು ನಿರ್ಧರಿಸಲು ಸಾಧ್ಯವಿಲ್ಲ.ಈ ಅಪರಾಧವು 4 ನೇ ವಿನಾಯಿತಿ ಅಡಿ ಬರುತ್ತದೆಯೇ ಅಥವಾ 5 ನೇ ವಿನಾಯಿತಿ ಅಡಿಯಲ್ಲಿ ಬರುತ್ತದೆಯೇ ಎಂಬುದನ್ನು ಪೂರ್ಣ ಪ್ರಮಾಣದ ಅಧಿವಿಚಾರಣೆಯಲ್ಲಿಯೇ ನಿರ್ಧರಿಸಬೇಕಾಗಿತ್ತೇ ವಿನಾ ಈ ಅಪಕ್ವ ಹಂತದಲ್ಲಲ್ಲ.ಈ ಹಿನ್ನೆಲೆಯಲ್ಲಿ ಸಹ, 304 ನೇ ಪ್ರಕರಣದ ಉಪಬಂಧಗಳು ಅನ್ವಯವಾಗುವುದಿಲ್ಲ ಎಂಬುದಾಗಿ ಅರ್ಜಿದಾರರ ಪರ ಮಾನ್ಯ ವಕೀಲರು ಮಾಡಿದ ವಾದಗಳನ್ನು ಅಂಗೀಕರಿಸಲಾಗುವುದಿಲ್ಲ.

12. ವಾದ-ವಿವಾದಗಳ ಸಂದರ್ಭದಲ್ಲಿ ದೊರಕಿಸಿಕೊಟ್ಟ ಆರೋಪಪಟ್ಟಿ ಸಾಕ್ಷ್ಯಾಧಾರವನ್ನು ನಾನು ತುಂಬಾ ಎಚ್ಚರಿಕೆಯಿಂದ ಹಾಗೂ ಜಾಗರೂಕತೆಯಿಂದ ಪರಿಶೀಲಿಸಿದ್ದೇನೆ.ಆರೋಪಪಟ್ಟಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಅರ್ಜಿದಾರನ/ಆರೋಪಿಯ ವಿರುದ್ಧ ಮಾಡಿರುವ ಮುಖ್ಯ ಆರೋಪವೆಂದರೆ, ಒಬ್ಬ ನಿರ್ದೇಶಕನಾಗಿ, ಅವರು ಸರ್ಕಾರದ ಪ್ರಾಧಿಕಾರದಿಂದ ಅಗತ್ಯ ಅನುಮತಿಯನ್ನು ಪಡೆದುಕೊಂಡಿದ್ದರು ಮತ್ತು ಸೂಕ್ತ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳದೆ ಮತ್ತು ಅವರಿಗೆ ಈಜು ಬರುವುದಿಲ್ಲವೆಂದು ಸ್ಪಷ್ಟವಾಗಿ ಗೊತ್ತಿದ್ದರೂ ' ಮಾಸ್ತಿಗುಡಿ ' ಚಲನಚಿತ್ರವನ್ನು ಚಿತ್ರೀಕರಿಸುವ ಸಾಹಸಕ್ಕೆ ಕೈ ಹಾಕಿದ್ದರು ಮತ್ತು ಹಾರುತ್ತಿದ್ದ ಹೆಲಿಕಾಪ್ಟರ್‌ನಿಂದ ಧುಮುಕುವಂತೆ ಅವರಿಗೆ ಹೇಳಿದರು.ಸಮರ್ಪಕ ಸುರಕ್ಷತಾ ಕ್ರಮಗಳನ್ನು

ತೆಗೆದುಕೊಳ್ಳದ್ದರಿಂದಾಗಿ, ಆಪಾದಿತ ಘಟನೆ ಜರುಗಿತು.ಈ ಹಿನ್ನೆಲೆಯಲ್ಲಿ ಭಾರತ ದಂಡ ಸಂಹಿತೆಯ 304 ನೇ ಪ್ರಕರಣದ ಉಪಬಂಧಗಳು ಪ್ರಸಕ್ತ ಮೊಕದ್ದಮೆಯ ಸಂಗತಿಗಳಿಗೆ ಅನ್ವಯವಾಗುವುದಿಲ್ಲವೆಂಬ ಅಭಿಪ್ರಾಯಕ್ಕೆ ಬರಲು ಸಾಧ್ಯವಿಲ್ಲ.

13. ಸದರಿ ಕೃತ್ಯವು ಭಾರತ ದಂಡ ಸಂಹಿತೆಯ 80, 87 ಮತ್ತು 88 ನೇ ಪಕರಣಗಳ ಅಡಿಯಲ್ಲಿನ ಸಾಮಾನ್ಯ ಅಪವಾದಗಳ ವ್ಯಾಪ್ತಿಯಲ್ಲಿ ಬರುತ್ತದೆಂಬುದು ಅರ್ಜಿದಾರ/ಆರೋಪಿಯ ಪರ ಮಾನ್ಯ ವಕೀಲರ ನಂತರದ ವಾದವಾಗಿದೆ.ನಾನು ಸದರಿ ಉಪಬಂದಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ.ಸಾಮಾನ್ಯ ವಿನಾಯಿತಿಗಳ ಸದರಿ ಉಪಬಂಧಗಳನ್ನು ಅನ್ವಯವಾಗುವಂತೆ ಮಾಡಬೇಕಾದರೆ, ಆಗ ಅಂಥ ಸನ್ನಿವೇಶಗಳಲ್ಲಿ, ಪ್ರಾಸಿಕ್ಯೂಷನ್ನ ವಾದವನ್ನು ಅಂಥ ಯಾವುದೇ ಒಂದು ವಿನಾಯಿತಿಯ ಅಡಿಯಲ್ಲಿ ತರಲು ಆರೋಪಿಗೆ ಮುಕ್ತವಾದ ರಕ್ಷಣೆ ಇದೆ. ಆ ನಿರ್ದಿಷ್ಟ ಸಂಗತಿಯನ್ನು ಅಧಿವಿಚಾರಣೆಯ ಹಂತದಲ್ಲಿಯೇ ಪರಿಗಣನೆಗೆ ತೆಗೆದುಕೊಳ್ಳಬೇಕಾಗಿತ್ತು.ವಿಲೆಗಾಗಿ ಅರ್ಜಿಯನ್ನು ಪರಿಗಣಿಸುವ ಸಮಯದಲ್ಲಿ, ನ್ಯಾಯಾಲಯವು ದಾಖಲೆಯಲ್ಲಿ ಮಂಡಿಸಿದ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಬೇಕಾಗಿತ್ತೆಂಬುದರಲ್ಲಿ ಅನುಮಾನವೇ ಇಲ್ಲ. ಆದರೆ ಸಂಕ್ಷಿಪ್ತ ವಿಚಾರಣೆ ನಡೆಸದೆ, ಸೂಕ್ತ ನಿರ್ಣಯಕ್ಕೆ ಬರಬೇಕಾಗಿತ್ತೆಂಬುದು ಕಾನೂನಿನ ಪ್ರಸ್ತಾಪಿತ ಪ್ರಸ್ತಾವನೆಯಾಗಿದೆ.ಆರೋಪವನ್ನು ರೂಪಿಸುವ ಸಮಯದಲ್ಲಿ ಏನನ್ನು ನೋಡಬೇಕು ಎಂಬುದನ್ನು ನಿರ್ಣಯಗಳ ಸರಣಿಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ಧರಿಸುತ್ತದೆ.ಆರೋಪಿಯ ವಿರುದ್ಧ ವಾದವನ್ನು ಸಮರ್ಥಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಕಂಡುಕೊಳ್ಳುವ ಪರಿಮಿತ ಉದ್ದೇಶಕ್ಕಾಗಿ ಸಾಕ್ಷ್ಯವನ್ನು ಬದಲಾಯಿಸುವ ಮತ್ತು ಮೌಲ್ಯ ನಿರ್ಧರಣೆ ಮಾಡುವ ನಿರ್ವಿವಾದ ಅಧಿಕಾರ ನ್ಯಾಯಾಲಯಕ್ಕೆ ಇತ್ತು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.ಮೇಲ್ನೋಟದ ವಾದವನ್ನು ನಿರ್ಧರಿಸುವ ವಿಧಾನವು ಸಹಜವಾಗಿಯೇ ಪ್ರತಿಯೊಂದು ಮೊಕದ್ದಮೆಯ ಸಂಗತಿಗಳನ್ನು ಆಧರಿಸಿರುತ್ತದೆ ಮತ್ತು ಈ ಸಂಬಂಧದಲ್ಲಿ ಯಾವುದೇ ನೇರ ನಿರ್ಬಂಧಾತ್ಮಕ ಸೂತ್ರವನ್ನಾಗಲೀ ಅಥವಾ ಸಾರ್ವತ್ರಿಕ ಕಾನೂನನ್ನಾಗಲೀ ಮಾಡಲು ಸಾಧ್ಯವಿಲ್ಲ.

14. ಇದು ಯೂನಿಯನ್ ಆಫ್ ಇಂಡಿಯಾ -ವಿರುದ್ಧ-ಪ್ರಫುಲ್ಲ ಕುಮಾರ್ ಸಮಾಲ್ ಮತ್ತು ಮತ್ತೊಬ್ಬರು ' 1 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ಕಾನೂನಿನ ಸುಸ್ಥಾಪಿತ ಪ್ರತಿಪಾದನೆಯಾಗಿದೆ.ಅದರಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ನ್ಯಾಯಾಲಯದ ಮುಂದೆ ಮಂಡಿಸಿದ ಸಾಕ್ಷ್ಯಾಧಾರವು, ಸರಿಯಾಗಿ ವಿವರಿಸಲಾಗದಿರುವ ಆಪಾದಿತನ ವಿರುದ್ಧ ಗಂಭೀರ ಅನುಮಾನಗಳನ್ನು ಬಹಿರಂಗಪಡಿಸಿದಲ್ಲಿ, ನ್ಯಾಯಾಲಯವು ಆರೋಪವನ್ನು ರೂಪಿಸಲು ನ್ಯಾಯಾಲಯಕ್ಕೆ ಸಂಪೂರ್ಣ ಸಮರ್ಥನೆ ಇರುತ್ತದೆ ಎಂದು ಅಭಿಪ್ರಾಯಪಡಲಾಗಿದೆ.ಒಟ್ಟಿನಲ್ಲಿ ಎರಡು ಅಭಿಪ್ರಾಯಗಳು ಸಮಾನವಾಗಿ ಸಂಭಾವ್ಯವಿದ್ದರೆ ಮತ್ತು ಗುಮಾನಿಯನ್ನುಂಟು ಮಾಡಿದರೆ, ಆಗ, ನ್ಯಾಯಾಲಯವು ನ್ಯಾಯಿಕ ಪ್ರಜ್ಞೆಯನ್ನು ಅನ್ವಯಿಸಿ, ಆರೋಪವನ್ನು ರೂಪಿಸಲು ಮುಂದುವರೆಯಬಹುದು ಮತ್ತು ಅಧಿವಿಚಾರಣೆಯನ್ನು ನಡೆಸಲು ನಿರ್ಧರಿಸುತ್ತದೆ.ಸಂಕ್ಷಿಪ್ತತೆಯ ಉದ್ದೇಶಕ್ಕಾಗಿ ನಾನು ಸದರಿ ನಿರ್ಣಯದ 10 ನೇ ಕಂಡಿಕೆಯನ್ನು ಉಲ್ಲೇಖಿಸುತ್ತೇನೆ.ಅದನ್ನು ಈ ಮುಂದಿನಂತೆ ಓದಲಾಗಿದೆ:

" ಹೀಗಾಗಿ ಮೇಲೆ ನಮೂದಿಸಿದ ಪ್ರಾಧಿಕಾರಗಳ ಪರಿಗಣನೆಯಿಂದ, ಈ ಮುಂದಿನ ತತ್ವಗಳು ಮೂಡುತ್ತವೆ:

( 1) ಸಂಹಿತೆಯ 227 ನೇ ಪ್ರಕರಣದ ಅಡಿಯಲ್ಲಿ ಆರೋಪಗಳನ್ನು ರೂಪಿಸುವ ಪ್ರಶ್ನೆಯನ್ನು ಪರಿಗಣಿಸುವಾಗ, ನ್ಯಾಯಾಧೀಶರು ಆರೋಪಿಯ ವಿರುದ್ಧ ಮೇಲ್ನೋಟಕ್ಕೆ ವಾದವನ್ನು ಸಾಬೀತುಪಡಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಕಂಡುಕೊಳ್ಳುವ ಪರಿಮಿತ ಉದ್ದೇಶಕ್ಕಾಗಿ ಸಾಕ್ಷ್ಯವನ್ನು ಬದಲಾಯಿಸುವ ಅಥವಾ ಮೌಲ್ಯನಿರ್ಧರಣೆ ಮಾಡುವ ನಿರ್ವಿವಾದ ಅಧಿಕಾರವನ್ನು ಹೊಂದಿರುತ್ತಾರೆ.

( 2) ನ್ಯಾಯಾಲಯದ ಮುಂದೆ ಮಂಡಿಸಿದ ಸಾಕ್ಷ್ಯಾಧಾರಗಳು, ಆರೋಪಿಯ ವಿರುದ್ಧ ಸರಿಯಾಗಿ ವಿವರಿಸಲಾಗದಿರುವ ಗಂಭೀರ ಅನುಮಾನವನ್ನು ಬಹಿರಂಗಪಡಿಸಿದಲ್ಲಿ, ನ್ಯಾಯಾಲಯವು ಆರೋಪವನ್ನು ರೂಪಿಸಲು ಮತ್ತು ವಿಚಾರಣೆಯನ್ನು ಮು ಂ ದುವರೆಸಲು ಸಂಪೂರ್ಣವಾಗಿ ಸಮರ್ಥನೆಯನ್ನು ಹೊಂದಿರುತ್ತದೆ.

( 3) ಮೇಲ್ನೋಟದ ವಾದವನ್ನು ನಿರ್ಧರಿಸುವ ವಿಧಾನವು ಸಹಜವಾಗಿಯೇ ಪ್ರತಿಯೊಂದು ಮೊಕದ್ದಮೆಯ ಸಂಗತಿಗಳನ್ನು ಆಧರಿಸಿರುತ್ತದೆ ಮತ್ತು ಇದಕ್ಕೆ ಸಾರ್ವತ್ರಿಕ ಅನ್ವಯತೆಯ ನಿಯಮವನ್ನು ವಿಧಿಸುವುದು ಕಷ್ಟ. ಆದಾಗ್ಯೂ, ಸಾಮಾನ್ಯವಾಗಿ ಎರಡು ಅಭಿಪ್ರಾಯಗಳು ಸಮಾನವಾಗಿ ಸಾಧ್ಯವಾದರೆ ಮತ್ತು ನ್ಯಾಯಾಧೀಶರು, ತನ್ನ ಮುಂದೆ ಮಂಡಿಸಿದ ಸಾಕ್ಷ್ಯವು ಕೆಲವು ಅನುಮಾನಗಳನ್ನು ಹುಟ್ಟಿಸುತ್ತವೆಯಾದರೂ, ಅವು ಆರೋಪಿಯ ವಿರುದ್ಧ ಗಂಭೀರ ಅನುಮಾನಗಳನ್ನು ಹುಟ್ಟು ಹಾಕುವುದಿಲ್ಲವೆಂದು ಭಾವಿಸಿದರೆ, ಅವರು ಆರೋಪಿಯನ್ನು ಬಿಡುಗಡೆ ಮಾಡುವ ಸಂಪೂರ್ಣ ಹಕ್ಕನ್ನು ಹೊಂದಿರುತ್ತಾರೆ.

( 4) ಹಿರಿಯ ಮತ್ತು ಅನುಭವಿ ನ್ಯಾಯಾಲಯದ ನ್ಯಾಯಾಧೀಶರು ಸಂಹಿತೆಯ 227 ನೇ ಪ್ರಕರಣದಡಿಯಲ್ಲಿ ತನ್ನ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ, ಕೇವಲ ಅಂಚೆ ಕಚೇರಿಯಾಗಿ ಅಥವಾ ಪ್ರಾಸಿಕ್ಯೂಷನ್ನ ಮುಖವಾಣಿಯಾಗಿ ಕಾರ್ಯನಿರ್ವಹಿಸಬಾರದು.ಮಿಗಿಲಾಗಿ ಮೊಕದ್ದಮೆಯ ಗಂಭೀರ ಸಾಧ್ಯತೆಗಳು ನ್ಯಾಯಾಲಯದ ಮುಂದೆ ಮಂಡಿಸಿದ ಸಾಕ್ಷ್ಯದ ಮತ್ತು ದಸ್ತಾವೇಜುಗಳ ಒಟ್ಟಾರೆ ಪರಿಣಾಮ ಮೊಕದ್ದಮೆಯಲ್ಲಿ ಕಂಡುಬರುವ ಮೂಲ ದೌರ್ಬಲ್ಯಗಳು ಮುಂತಾದ ವಿಷಯಗಳನ್ನು ಪರಿಗಣಿಸಬೇಕಾಗುತ್ತದೆ.ಎಂದರೆ, ನ್ಯಾಯಾಧೀಶರು ವಿಷಯದ ಸಾಧಕಬಾಧಕಗಳ ಬಗ್ಗೆ ಸಂಚಾರ ಆಧಾರಿತ ತನಿಖೆ ತನಿಖೆ ಮಾಡಬೇಕು ಮತ್ತು ಅವರು ಅಧಿ ವಿಚಾರಣೆಯನ್ನು ನಡೆಸುತ್ತಿದ್ದರೆ ಹೇಗೋ ಹಾಗೆ ಸಾಕ್ಷ್ಯವನ್ನು ಮೌಲ್ಯನಿರ್ಧರಣೆ ಮಾಡಬೇಕು ಎಂದು ಅರ್ಥವಲ್ಲ.

15. ಕಾನೂನಿನ ಈ ಪ್ರಸ್ತಾವನೆಯನ್ನು ಆಸಿಮ್ ಷರೀಫ್ –ವಿರುದ್ಧ ನ್ಯಾಷನಲ್ ಇನ್ವೆಸ್ಟಿಗೇಷನ್ ಏಜೆನ್ಸಿ- ಮೊಕದ್ದಮೆಯ 18, 20, 23 ಮತ್ತು 25 ನೇ ಕಂಡಿಕೆಗಳಲ್ಲಿ ಪುನರುಚ್ಚರಿಸಲಾಗಿದ್ದು, ಅದರಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

"18. ಈ ನ್ಯಾಯಾಲಯವು ವಿಧಿಸಿದ ವಿಷಯದ ಮೇಲಿನ ಕಾನೂನಿನ ಪ್ರತಿಪಾದನೆಯನ್ನು ಗಮನಕ್ಕೆ ತೆಗೆದುಕೊಂಡು, ನ್ಯಾಯಾಧೀಶರು ಸೆಷನ್ಸ್ ಮೊಕದ್ದಮೆಗಳಲ್ಲಿ ವಾರಂಟು ಮೊಕದ್ದಮೆಗಳಿಗೆ ಸಂಬಂಧಿಸಿದ ದಂಡ ಪ್ರಕ್ರಿಯಾ ಸಂಹಿತೆಯ 239 ನೇ ಪ್ರಕರಣಕ್ಕೆ ಸದೃಶವಾದ, ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದ ಅಡಿಯಲ್ಲಿ ಆರೋಪವನ್ನು ರೂಪಿಸುವ ಪ್ರಶ್ನೆಯನ್ನು ಪರಿಗಣಿಸುವಾಗ, ಆರೋಪಿಯ ವಿರುದ್ಧ ಮೇಲ್ನೋಟಕ್ಕೆ ವಾದವನ್ನು ಸಮರ್ಥಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಕಂಡುಕೊಳ್ಳುವ ಪರಿಮಿತ ಉದ್ದೇಶಕ್ಕಾಗಿ ಸಾಕ್ಷ್ಯವನ್ನು ಬದಲಾಯಿಸುವ ಮತ್ತು ಮೌಲ್ಯನಿರ್ಧರಣೆ ಮಾಡುವ ಹಕ್ಕನ್ನು

ನ್ಯಾಯಾಧೀಶರು ನಿರ್ವಿವಾದವಾಗಿ ಹೊಂದಿರುತ್ತಾರೆ; ನ್ಯಾಯಾಲಯದ ಮುಂದೆ ಮಂಡಿಸಲಾದ ಸಾಕ್ಷ್ಯಾಧಾರಗಳು, ಆರೋಪಿಯ ವಿರುದ್ಧ ಸರಿಯಾಗಿ ವಿವರಿಸಲಾಗದಿರುವ ಗಂಭೀರ ಅನುಮಾನಗಳನ್ನು ಬಹಿರಂಗಪಡಿಸಿದಲ್ಲಿ, ನ್ಯಾಯಾಲಯವು ಆರೋಪವನ್ನು ರೂಪಿಸಲು ಸ ಂ ಪೂರ್ಣವಾದ ಸಮರ್ಥನೆಯನ್ನು ಹೊಂದಿರುತ್ತದೆ.ಒಟ್ಟಾರೆಯಾಗಿ, ಎರಡು ಅಭಿಪ್ರಾಯಗಳು ಸಾಧ್ಯವಿದ್ದು, ಅವುಗಳಲ್ಲಿ ಒಂದು, ಆಪಾದಿತನ ವಿರುದ್ಧ ಗಂಭೀರ ಅನುಮಾನಗಳಿಂದ ಗುರುತಿಸಲಾದಂತೆ ಅನುಮಾನಕ್ಕೆ ಮಾತ್ರ ಅವಕಾಶ ನೀಡಿದರೆ, ಅವನನ್ನು ಬಿಡುಗಡೆ ಮಾಡಲು ಅಧಿವಿಚಾರಣಾ ನ್ಯಾಯಾಧೀಶರಿಗೆ ಸಮರ್ಥನೆ ಇರುತ್ತದೆ.ಹಾಗಾಗಿ, ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದ ಅಡಿಯಲ್ಲಿ ವಿಮೋಚನಾ ಅರ್ಜಿಯನ್ನು ಪರಿಶೀಲಿಸುವಾಗ, ಅಧಿ ವಿಚಾರಣಾ ನ್ಯಾಯಾಧೀಶರು ಮೊಕದ್ದಮೆಯನ್ನು ಅಧಿವಿಚಾರಣೆಗಾಗಿ ಗುರುತಿಸಲಾಗಿದೆಯೇ ಇಲ್ಲವೇ ಎಂಬುದನ್ನು ನಿರ್ಧರಿಸಲು ತನ್ನ ನ್ಯಾಯಿಕ ಪ್ರಜ್ಞೆಯನ್ನು ಚಲಾಯಿಸುತ್ತಾರೆಂದು ನಿರೀಕ್ಷಿಸಲಾಗಿದೆಯೆಂಬುದು ಸ್ಪಷ್ಟವಾಗುತ್ತದೆ.ಅಂಥ ವ್ಯವಹರಣೆಗಳಲ್ಲಿ, ನ್ಯಾಯಾಲಯವು ದಾಖಲೆಯಲ್ಲಿರುವ ಸಾಕ್ಷ್ಯವನ್ನು ತಕ್ಕ ಕ್ರಮದಲ್ಲಿ ಜೋಡಿಸುವ ಮೂಲಕ ಕಿರು ವಿಚಾರಣೆಯನ್ನು ನಡೆಸುವ ಉದ್ದೇಶ ಹೊಂದಿರುವುದಿಲ್ಲ.

20. ತನಿಖೆ ಪೂರ್ಣಗೊ ಂ ಡ ತರುವಾಯ, ದಿನಾ ಂ ಕ:21.04.2017 ರಂದು 1 ರಿಂದ 5 ರವರೆಗಿನ ಆರೋಪಿಗಳ ವಿರುದ್ಧ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಅಂತಿಮ ವರದಿಯನ್ನು ಸಲ್ಲಿಸಲಾಯಿತು.ಈ ಹಂತದಲ್ಲಿ, ಅಪೀಲುದಾರ-ಆರೋಪಿಯು ಮೇಲೆ ಹೇಳಲಾದ ಆರೋಪಗಳಿಗೆ ಸಂಬಂಧಿಸಿದ ಆರೋಪದಿಂದ ತನ್ನನ್ನು ಬಿಡುಗಡೆಗೊಳಿಸುವಂತೆ ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಅಧಿವಿಚಾರಣಾ ನ್ಯಾಯಾಲಯವು ನಂಬಲರ್ಹ ಕಾರಣಗಳನ್ನು ಮತ್ತು ದಿನಾಂಕ 12.01.2018 ರ ತನ್ನ ಆದೇಶದ ಮೇರೆಗೆ ಆತನ ಮತ್ತು ಇತರ ಆರೋಪಿಗಳ ( 1 ರಿಂದ 4 ರವರೆಗಿನ ಆರೋಪಿಗಳು) ವಿರುದ್ಧ ಆಪಾದನೆಯನ್ನು ರೂಪಿಸುವ ಆದೇಶವನ್ನು ದಾಖಲಿಸಿದ ನಂತರ ವಜಾಗೊಳಿಸಿತು.ಆದೇಶದ ಉದ್ಧೃತ ಭಾಗವು ಈ ಮುಂದಿನಂತಿದೆ:

"22. ಈ ನ್ಯಾಯಾಲಯವು ಆಪಾದಿಸಲಾದ ಅಪರಾಧಗಳ ಸಂಜ್ಞೇಯತೆಯನ್ನು ಈಗಾಗಲೇ ತೆಗೆದುಕೊಂಡಿದೆ ಎಂಬುದನ್ನು ಇಲ್ಲಿ ಪ್ರಸ್ತಾಪಿಸುವ ಅಗತ್ಯ ಇಲ್ಲ ಮತ್ತು ಮಂಜೂರಾತಿಯನ್ನು ಪಡೆದುಕೊಳ್ಳುವುದು ಆರೋಪಿಸಲಾದ ಆಪಾದನೆಗಳನ್ನು ಸಂಜ್ಞೆ ಯತೆಗೆ ತೆಗೆದುಕೊಂಡ ದಿನಾಂಕದಂದು ಇದ್ದಂತೆ ಪೂರ್ವನಿದರ್ಶನದ ಷರತ್ತಾಗಿರುತ್ತದೆ ಎಂಬುದನ್ನೂ ಸಹ ಇಲ್ಲಿ ನಮೂದಿಸುವ ಅಗತ್ಯವಿಲ್ಲ.ಅಲ್ಲದೆ, ಆರೋಪಿಸಲಾದ ಆಪಾದನೆಗಳನ್ನು ಸಂಕ್ಷೇಯತೆಗೆ ತೆಗೆದುಕೊಳ್ಳುವ ಸಮಯದಲ್ಲಿ ರಾಷ್ಟ್ರೀಯ ತನಿಖಾ ಏಜೆನ್ಸಿ (ಎನ್‌ಐಎ) ಯು ಮಂಜೂರಾತಿಯನ್ನು ಪಡೆದುಕೊಂಡಿರುವುದರಿಂದ ಮತ್ತು ಈ ನ್ಯಾಯಾಲಯವು ಈಗಾಗಲೇ ಸಂಜ್ಞೇಯತೆಯನ್ನು ತೆಗೆದುಕೊಂಡಿರುವುದರಿಂದ, ಮಂಜೂರಾತಿಯ ನೈಜತೆ ಅಥವಾ ಅನ್ಯಥಾ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶಗಳನ್ನು ಅಂಗೀಕರಿಸುವುದರಿಂದ ಅಪೀಲಿನ ಅಥವಾ ಪುನರೀಕ್ಷಣಾ ಅಧಿ ಕಾರ ವ್ಯಾಪ್ತಿಯ ಅತಿಕ್ರಮಣಕ್ಕೆ ಸಮನಾಗುತ್ತದೆಂಬ ಅತ್ಯಂತ ಸರಳ ಕಾರಣಕ್ಕಾಗಿ, ಮಂಜೂರಾತಿಯ ಸಂಬಂಧದಲ್ಲಿ ಯಾವುದೇ ಆದೇಶವನ್ನು ಹೊರಡಿಸುವುದು ಸರಿಯಲ್ಲ ಎ ಂ ಬುದು ಈ ನ್ಯಾಯಾಲಯದ ದೃಢ ಅಭಿ ಪ್ರಾಯ.ಸಂಜ್ಞೆಯತೆಯನ್ನು ತೆಗೆದುಕೊಳ್ಳುವ ಆದೇಶವು ಇಂದಿಗೂ ಪ್ರಸ್ತುತವಾಗಿದೆ.ಆದ್ದರಿಂದ, ಈ ಪ್ಯಾರಾಗಳಲ್ಲಿ ಮತ್ತು ಈ ಆದೇಶದ ಈ ಮುಂಚಿನ ಪ್ಯಾರಾಗಳಲ್ಲಿ ಗೊತ್ತುಪಡಿಸಿದ ಕಾರಣಗಳಿಗಾಗಿ, ತಾನು ಒದಗಿಸಿದ ಸಾಕ್ಷ್ಯಾಧಾರಗಳು ಮೊಕದ್ದಮೆಯನ್ನು ಮುಂದುವರೆಸಲು

ಸಾಕಷ್ಟಿವೆ ಮತ್ತು ಆಪಾದಿತ ಅಪರಾಧಗಳ ಮೇಲ್ನೋಟದ ವಾದದ ಅಸ್ತಿತ್ವದ ವ್ಯಕ್ತಿಗತ ಮನವರಿಕೆಯನ್ನು ಅದೇ ಮಾಡಿಕೊಡುತ್ತದೆ ಎಂಬುದನ್ನು ರಾಷ್ಟ್ರೀಯ ತನಿಖಾ ಏಜೆನ್ಸಿ (ಎನ್‌ಐಎ) ಯು ರುಜುವಾತುಪಡಿಸಿದೆ.ಆದ್ದರಿಂದ, 2 ನೇ ಅಂಶದ ವಸ್ತುವಿಷಯವು ನಕಾರಾತ್ಮಕವಾಗಿ ಉತ್ತರ ನೀಡಲು ಮತ್ತು 3 ನೇ ಅಂಶವು ಸಕಾರಾತ್ಮಕವಾಗಿ ಉತ್ತರಿಸಲು ಮತ್ತು 4 ನೇ ಅಂಶವು ನಕಾರಾತ್ಮಕವಾಗಿ ಉತ್ತರಿಸಲು ಅರ್ಹವಾಗಿದೆ ಮತ್ತು ಸದರಿ ಅಂಶಗಳಿಗೆ ತದನುಸಾರವಾಗಿ ಉತ್ತರ ನೀಡಲಾಗಿದೆ.ಈ ನ್ಯಾಯಾಲಯವು ಈ ಮುಂದಿನಂತೆ ಆದೇಶಿಸುತ್ತದೆ:

ಆದೇಶ

5 ನೇ ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಯನ್ನು ಈ ಮೂಲಕ ವಜಾಗೊಳಿಸಲಾಗಿದೆ.ಪ್ರಸ್ತುತ ಮೊಕದ್ದಮೆಯು ಆರೋಪ ಪಟ್ಟಿಯಲ್ಲಿ ನಮೂದಿಸಲಾದಂತೆ ಎಲ್ಲ ಆರೋಪಿಗಳ ವಿರುದ್ಧ ಆರೋಪಿಸಲಾದ ಅಪರಾಧಗಳ ಸಂಬಂಧದಲ್ಲಿ ಆರೋಪಗಳನ್ನು ರೂಪಿಸಲು ಅರ್ಹವಾಗಿದೆ ".

23. ಪ್ರಸಕ್ತ ಸಂಗತಿಗಳು ಮತ್ತು ಸನ್ನಿವೇಶಗಳಲ್ಲಿ, ದಾಖಲೆಗಳನ್ನು ಹಾಗೂ ನಮ್ಮ ಮುಂದೆ ಪ್ರಶ್ನಿಸಲಾದ ತೀರ್ಪನ್ನು ಪರಿಶೀಲಿಸಿದ ತರುವಾಯ, ಅಧಿವಿಚಾರಣಾ ನ್ಯಾಯಾಲಯವು ನೀಡಿದ ಮತ್ತು ನಮ್ಮ ಮಧ್ಯಪ್ರವೇಶವನ್ನು ಕೋರಿರುವ ೨ದಿನಾಂಕ: 22.11.2018 ರ ಆಸಿಮ್ ಶರೀಫ್ -ವಿರುದ್ಧ ಎನ್‌ಐಎ 2018 ಎಸ್ಸಿ ಆನ್ಲೈನ್ ಕೆಎಆರ್ 3775 ಪ್ರಶ್ನಿತ ತೀರ್ಪಿನ ಮೂಲಕ ಉಚ್ಚ ನ್ಯಾಯಾಲಯವು ಚ ದೃಢೀಕರಿಸಿದ ತೀರ್ಪಿನಲ್ಲಿ ಯಾವುದೇ ದೋಷವಿಲ್ಲವೆಂದು ನಮಗೆ ಕಂಡುಬರುತ್ತದೆ.

25. ಮೇಲ್ಕಂಡ ಈ ಅಭಿಪ್ರಾಯಗಳೊಂದಿಗೆ ಅಪೀಲನ್ನು ವಜಾಗೊಳಿಸಲಾಗಿದೆ.ಯಾವುವಾದರೂ ಅರ್ಜಿಗಳು ಬಾಕಿ ಇದ್ದರೆ ಅವು ವಿಲೆಯಾಗಿವೆಯೆಂದು ಅರ್ಥೈಸಬಹುದು.

16. ಕೆಲವು ಸಾಕ್ಷ್ಯಗಳ ಮೇಲೆ ಬಲವಾದ ಸಂಶಯವನ್ನು ಹೊಂದಬೇಕು.ವಿಚಾರಣೆಯ ಹಂತದಲ್ಲಿ ಸಾಕ್ಷ್ಯವಾಗಿ ಪರಿವರ್ತಿಸಬಹುದಾದಂತಹ ಸಾಕ್ಷ್ಯಗಳಿರಬೇಕು.ಅದು ಪ್ರಾಸಿಕ್ಯೂಷನ್ನ ವಾದವನ್ನು ರುಜುವಾತುಪಡಿಸುವುದಿಲ್ಲ.ಆರೋಪಿಯು ಅಪರಾಧವನ್ನು ಮಾಡಿದ್ದಾನೆಯೇ ಅಥವಾ ಇಲ್ಲವೇ ಎಂಬ ನ್ಯಾಯಾಧೀಶರ ನೈತಿಕ ಊಹೆಗಳನ್ನಾದರಿಸಿದ ಬಲವಾದ ಅನುಮಾನವು ಶುದ್ಧ ವ್ಯಕ್ತಿಗತ ಮನವರಿಕೆಯಾಗಬಾರದು.ಅನುಮಾನವು ಕೆಲವು ಸಾಕ್ಷ್ಯಧಾರಗಳನ್ನಾಧರಿಸಿ ಮೇಲೆ ಮಾಡಿರುವ ಅನುಮಾನವಾಗಿರಬೇಕಿದ್ದು, ಇದು ಆರೋಪಿಯು ಅಪರಾಧವನ್ನು ಎಸಗಿದ್ದಾನೆ ಎಂಬುದನ್ನು ಮೇಲ್ನೋಟಕ್ಕೆ ರುಜುವಾತುಪಡಿಸಲು ಸಮರ್ಪಕವಾಗಿರುವಂತೆ ಸ್ವತಃ ನ್ಯಾಯಾಲಯಕ್ಕೆ ಒಪ್ಪಿಗೆಯಾಗುವಂತಿರಬೇಕು.ಕಾನೂನಿನ ಈ ಪ್ರಸ್ತಾವನೆಯನ್ನು ದೀಪಕ್ಬಾಯ್ ಜಗದೀಶ್ಚಂದ್ರ ಪಟೇಲ್ -ವಿರುದ್ಧ-ಗುಜರಾತ್ ರಾಜ್ಯ ಮತ್ತು ಮತ್ತೊಬ್ಬರು- 3 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ್ದು, ಅದರ 23 ನೆಯ ಪ್ಯಾರಾದಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

3. 2019 ಎಸ್ಸಿ ಆನ್ಲೈನ್ ಎಸ್ಸಿ 588 2021

" ಈ ನ್ಯಾಯಾಲಯವು ವಿಧಿಸಿರುವ ತತ್ವಗಳಿಗನುಗುಣವಾಗಿ ಆರೋಪವನ್ನು ರೂಪಿಸುವ ಹಂತದಲ್ಲಿ, ಇದು ಕೇವಲ ಒಂದು ಅಂಚೆ ಕಚೇರಿಯಂತೆ ಕಾರ್ಯನಿರ್ವಹಿಸಬಾರದೆಂದು ನ್ಯಾಯಾಲಯವು ನಿರೀಕ್ಷಿಸುತ್ತದೆ.ನ್ಯಾಯಾಲಯವು ತನ್ನ ಮುಂದಿರುವ ಸಾಕ್ಷ್ಯವನ್ನು ಶೋಧಿಸಬೇಕು.ಶೋಧಿಸಲಾದ ಸಾಕ್ಷ್ಯವು ಪ್ರಾಸಿಕ್ಯೂಷನ್ ಹಾಜರುಪಡಿಸಿರುವ ಮತ್ತು ಅವಲಂಬಿಸಿರುವ ಸಾಕ್ಷ್ಯವಾಗಿರುತ್ತದೆ.ಶೋಧನೆಯು, ಪೂರ್ಣ ಪ್ರಮಾಣದ ವಿಚಾರಣೆಯ ನಂತರ, ಸಂಪೂರ್ಣ ಸಾಕ್ಷ್ಯಗಳನ್ನು ಮಂಡಿಸಿದ ತರುವಾಯ, ನ್ಯಾಯಾಲಯವು ಅಧಿ ವಿಚಾರಣಾ ನ್ಯಾಯಾಧೀಶರ ವಾದ-ವಿವಾದಗಳನ್ನು ಆಲಿಸಿದೆ.ಎಂಬ ಅರ್ಥದಲ್ಲಿ ನಿಖರವಾಗಿರಬಾರದು ಮತ್ತು ಆರೋಪಿಯ ಅಪರಾಧ ನಿರ್ಣಯಕ್ಕಾಗಿ ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸೃಷ್ಟಿಸಿದೆಯೇ ಎಂಬುದು ಪ್ರಶ್ನೆಯಲ್ಲ.ಲಭ್ಯ ಸಾಕ್ಷ್ಯಾಧಾರಗಳೊಂದಿಗೆ ಆರೋಪಿಯು ವಿಚಾರಣೆ ಎದುರಿಸುವಂತೆ ಮೊಕದ್ದಮೆಯನ್ನು ರೂಪಿಸಲಾಗಿದೆ ಎಂದು ನ್ಯಾಯಾಲಯಕ್ಕೆ ಮನವರಿಕೆಯಾಗಬೇಕೆಂಬುದು ಅಗತ್ಯ.ಇದಕ್ಕೆ ಬಲವಾದ ಅನುಮಾನ ಸಾಕಾಗುತ್ತದೆ.ಆದರೂ, ಕೆಲವು ಸಾಕ್ಷ್ಯಗಳ ಮೇಲೆ ಬಲವಾದ ಸಂಶಯವನ್ನು ಹೊಂದಬೇಕು.ಅದು ವಿಚಾರಣೆಯ ಹಂತದಲ್ಲಿ ಸಾಕ್ಷ್ಯವಾಗಿ ಪರಿವರ್ತಿಸಬಹುದಾದಂತಹ ಸಾಕ್ಷ್ಯವಾಗಿರಬೇಕು.ಈ ಮೊಕದ್ದಮೆಯಲ್ಲಿ, ಆರೋಪಿಯು ಅಪರಾಧವನ್ನು ಎಸಗಿರುವ ಸಾಧ್ಯತೆ ಇದೆ ಎಂಬ ನ್ಯಾಯಾಧೀಶರ ನೈತಿಕ ಊಹೆಗಳನ್ನಾಧರಿಸಿದ ಬಲವಾದ ಅನುಮಾನವು ಶುದ್ಧ ವ್ಯಕ್ತಿಗತ ಮನವರಿಕೆಯಾಗಬಾರದು.ಅನುಮಾನವು ಕೆಲವು ಸಾಕ್ಷ್ಯಾಧಾರಗಳ ಮೇಲೆ ಮಾಡಿರುವ ಅನುಮಾನವಾಗಿರಬೇಕಾಗಿದ್ದು, ಇದು ಆರೋಪಿಯು ಅಪರಾಧವನ್ನು ಎಸಗಿದ್ದಾನೆ ಎಂಬುದನ್ನು ಮೇಲ್ನೋಟಕ್ಕೆ ರುಜುವಾತು ಪಡಿಸಲು ಸಮರ್ಪ ಸಮರ್ಪಕವಾಗಿರುವಂತೆ ಸ್ವತಃ ನ್ಯಾಯಾಲಯಕ್ಕೆ ಮನವರಿಕೆಯಾಗುವಂತಿರಬೇಕು ".

17. ಅಧಿವಿಚಾರಣಾ ನ್ಯಾಯಾಲಯವು ವಾಸ್ತವಿಕ ಸಂಗತಿಗಳನ್ನು ವಿಶ್ಲೇಷಿಸಿ, ಸಾಕ್ಷ್ಯವಿದೆಯೆಂಬ ನಿರ್ಣಯಕ್ಕೆ ಬಂದಿದೆ ಮತ್ತು ಅರ್ಜಿಯನ್ನು ಸರಿಯಾಗಿಯೇ ತಿರಸ್ಕರಿಸಿ ಆರೋಪ ರೂಪಿಸುವ ನಿರ್ಣಯಕ್ಕೆ ಬಂದಿದೆ.

18. ಮೇಲೆ ನಮೂದಿಸಲಾದ ನಿರ್ಣಯಗಳಲ್ಲಿ ವಿಧಿಸಲಾದ ತತ್ವಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವಾಸ್ತವಿಕ ಸಂಗತಿಗಳನ್ನು ಅವಲೋಕಿಸಿದರೆ, ಪ್ರಸಕ್ತ ಮೊಕದ್ದಮೆಯಲ್ಲಿ ಆರೋಪಿಯ ವಿರುದ್ಧ ಆರೋಪವನ್ನು ರೂಪಿಸಲು ವಿಫುಲವಾದ ಸಾಕ್ಷ್ಯಾ ಧಾರಗಳಿವೆ.ಅರ್ಜಿದಾರ/ಆರೋಪಿ ಪರ ಮಾನ್ಯ ವಕೀಲರು, ಚಲನಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಸದರಿ ಚಲನ ಚಿತ್ರದಲ್ಲಿ ರೋಮಾಂಚನವನ್ನು ಮೂಡಿಸಲು ಅಂಥ ಸಾಹಸದ ಚಟುವಟಿಕೆಗಳನ್ನು ಚಿತ್ರೀಕರಿಸಲಾಗಿದ್ದು, ಅಂಥ ಚಟುವಟಿಕೆಗಳು ತುಂಬಾ ಅಗತ್ಯವೆಂದು ವಾದಿಸಿದ್ದರೂ, ಇದು ಆಕ್ಷೇಪಣೆಯನ್ನು ಗಮನದಲ್ಲಿಟ್ಟುಕೊಳ್ಳುವುದನ್ನು ತಿಳಿಯುವುದಲ್ಲ.ಬದಲಾಗಿ, ಆರೋಪಿಯು ಮುನ್ನೆಚ್ಚರಿಕಾ ಅಥವಾ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತು ಮತ್ತು ಅವನು ಸಾಹಸ ಕಲಾವಿದ ಅಥವಾ ಖಳನಟರ ಜೀವನದೊ ೦ ದಿಗೆ ಚೆಲ್ಲಾಟವಾಡಬಾರದು, ಏನಾದರೂ ಅವಘಡ ಸಂಭವಿಸಿದರೆ, ಅವರು ತಮ್ಮ ಜೀವನವನ್ನೇ ಕಳೆದುಕೊಳ್ಳುತ್ತಾರೆ ಎಂಬ ಸಂಗತಿಯನ್ನು ಮರೆಯಬಾರದು.ಅಂಥ ಸನ್ನಿವೇಶಗಳಲ್ಲಿ,

ಚಲನಚಿತ್ರದ ಚಿತ್ರೀಕರಣದ ಸಮಯದಲ್ಲಿ ಅಂಥ ಅವಘಡಗಳು ನಡೆಯುವ ಸಂಭವವಿರುತ್ತದೆ ಮತ್ತು ಅವರು ಅಂಥ ಅಪಾಯಗಳಿಗೆ ಒಳಗಾಗುತ್ತಾರೆ ಎಂಬ ವಾದವನ್ನು ಕಾನೂನಿನಲ್ಲಿ ಒಪ್ಪಲಾಗುವುದಿಲ್ಲ.

19. ಮತ್ತೊಂದು ಸಂಗತಿಯೆಂದರೆ, 6 ನೇ ಆರೋಪಿಯ ಸಾಕ್ಷ್ಯವನ್ನು ದಾಖಲಿಸಲಾಗಿದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ.ಆತನ ಹಾಗೂ ಇತರ ಸಾಕ್ಷಿದಾರರ ಹೇಳಿಕೆಯಿಂದ ಹಾರುತ್ತಿರುವ ಹೆಲಿಕಾಪ್ಟರ್ನಿಂದ ಧುಮುಕುವ ಸದರಿ ಚಿತ್ರೀಕರಣವನ್ನು ಅಂಗೀಕರಿಸಲಾಗಿರಲಿಲ್ಲ.ಇಡೀ ಚಿತ್ರೀಕರಣದ ಸಾಮಗ್ರಿಗಳನ್ನು ಗಂಟು ಮೂಟೆ ಕಟ್ಟಲಾಗಿತ್ತು.ಆನಂತರ ಆಪಾದಿಸಲಾದ ಘಟನೆ ಸಂಭವಿಸಿತು ಎಂದು ತಿಳಿದುಬರುತ್ತದೆ.ಮೊಕದ್ದಮೆಯ ಸದರಿ ಸಂಗತಿಗಳು ಮತ್ತು ಸನ್ನಿವೇಶಗಳ ಹಿನ್ನೆಲೆಯಲ್ಲಿ, ಅರ್ಜಿದಾರ/ಆಪಾದಿತರ ಪರ ಮಾನ್ಯ ವಕೀಲರು ಅವರು ಅಂಥ ಅಪಾಯ ಎದುರಿಸಲು ಒಪ್ಪಿಗೆ ನೀಡಿದ್ದರು ಮತ್ತು ಭಾರತ ದಂಡ ಸಂಹಿತೆಯ 80, 87 ಮತ್ತು 88 ನೇ ಪ್ರಕರಣಗಳ ಉಪಬಂಧಗಳನ್ನು ಅನ್ವಯಿಸಲಾಗಿದ್ದರೂ, ಈ ಸಂಬಂಧದಲ್ಲಿ ಅವುಗಳನ್ನು ಅನ್ವಯಿಸಬಾರದಿತ್ತು ಎಂದು ವಾದಿಸಿದ್ದಾರೆ.ಅವು ಆರೋಪಿಗಳಿಗೆ ಲಭ್ಯವಿರುವ ರಕ್ಷಣೆಯಾಗಿದ್ದು, ಅವರು ಅವುಗಳನ್ನು ರುಜುವಾತುಪಡಿಸಬೇಕಾಗಿದೆ.

20. ಯಾವ ದೃಷ್ಟಿಯಿಂದ ನೋಡಿದರೂ ಅವರಿಗೆ ಭಾರತ ದಂಡ ಸಂಹಿತೆಯ 80, 87 ಮತ್ತು 88 ನೇ ಪ್ರಕರಣಗಳ ಅಡಿಯಲ್ಲಿ ಪ್ರಯೋಜನವನ್ನು ನೀಡಲು ಯಾವುದೇ ಕಾರಣಗಳಿಲ್ಲ.ಇದು, ಆರೋಪಿಗಳಿಗೆ ಸದರಿ ಉಪಬಂಧಗಳನ್ನು ಅನ್ವಯಿಸಲಾಗಿದೆಯೇ ಮತ್ತು ಅದರಡಿಯ ಪ್ರಯೋಜನಗಳನ್ನು ಅವರಿಗೆ ನೀಡಬಹುದೇ ಎಂಬುದನ್ನು ನಿರ್ಧರಿಸಲು ಅಂತಿಮ ತೀರ್ಪು ನೀಡುವ ಸಮಯದಲ್ಲಿ ಅಧಿವಿಚಾರಣಾ ನ್ಯಾಯಾಲಯಕ್ಕೆ ಮುಕ್ತವಾಗಿರಬೇಕಾದ ವಿಷಯವಾಗಿದೆ.

21. ಮೇಲೆ ಹೇಳಲಾದ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಪರಿಗಣಿಸಿ, ಅರ್ಜಿದಾರನು, ಅಧಿವಿಚಾರಣಾ ನ್ಯಾಯಾಲಯದ ಆದೇಶದಲ್ಲಿ ಮಧ್ಯಪ್ರವೇಶಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ಯುಕ್ತ ಕಾರಣಗಳನ್ನು ನೀಡಿಲ್ಲವೆಂಬುದು ನನ್ನ ಪರಿಗಣಿತ ಅಭಿಪ್ರಾಯವಾಗಿದೆ.ಅಧಿವಿಚಾರಣಾ ನ್ಯಾಯಾಲಯದ ಆದೇಶವು ಸ್ಥಿರೀಕರಿಸುವುದಕ್ಕೆ ಅರ್ಹವಾಗಿದೆ.ಗುಣಾರ್ಹತೆಗಳ ಕೊರತೆಯಿಂದಾಗಿ ಪುನರೀಕ್ಷಣಾ ಅರ್ಜಿಯು ವಜಾ ಮಾಡಲು ಅರ್ಹವಾಗಿದೆ.ತದನುಸಾರವಾಗಿ ಅದನ್ನು ವಜಾಗೊಳಿಸಲಾಗಿದೆ.

ಆದಾಗ್ಯೂ, ಈ ಅರ್ಜಿಯ ವಿಲೆಯಲ್ಲಿ ಮಾಡಲಾಗಿರುವ ಅಭಿಪ್ರಾಯಗಳು ಮೊಕದ್ದಮೆಯ ಅಂತಿಮ ವಿಲೆಗೆ ಅಡ್ಡ ಬರುವುದಿಲ್ಲ.

ತಡೆಯಾಜ್ಞೆ ಅರ್ಜಿಯನ್ನು ವಿಲೆ ಮಾಡಲಾಗಿದೆ.